# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 713
ಸದಸ್ಯರ ಹೆಸರು : ಡಾ: ಚಂದ್ರಶೇಖರ ಬಸವರಾಜ ಪಾಟೀಲ (ಪದವೀಧರರ ಕ್ಷೇತ್ರ)
ಉತ್ತರಿಸುವ ದಿನಾಂಕ : 21.08.2026
ಉತ್ತರಿಸುವ ಸಚಿವರು : ಮಾನ್ಯ ಜಲಸಂಪನ್ಮೂಲ ಸಚಿವರು

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಾರಂಜಾ ಜಲಾಶಯ ಹಿನ್ನೀರಿನಿಂದ ಒಟ್ಟು ಎಷ್ಟು ಗ್ರಾಮಗಳಿಗೆ ಸಮಸ್ಯೆಯಾಗುತ್ತಿದೆ;</td><td>ಕಾರಂಜಾ ಜಲಾಶಯ ಹಿನ್ನೀರಿನಿಂದ 1.ಅಮೀರಾಬಾದ್ 2. ಅತಿವಾಳ 3. ಬೋತಗಿ 4. ಮರಖಾಳ 5. ಸೀತಾಲಗೇರಿ 6.ಡಕುಳಗಿ 7. ಹಿಲ್ಲಾಪುರ 8. ಸಿಂದಬಂದಗಿ 9. ಮರಕುಂದಾ 10. ಔರಾದ್(ಎಸ್) 11. ಬೈರನಹಳ್ಳಿ 12. ಹಜ್ಜರಗಿ 13.ಹೊಚಕನಹಳ್ಳಿ 14. ನೆಲವಾಡ 15. ನಿಡವಂಚ 16.ರಂಜೋಳ ಖೇಣಿ 17. ಸಂಗೋಳಗಿ 18. ಸಿರಸಿ(ಎ) 19.ಬಗದಲ್ 20. ಬಾವಗಿ 21. ಸಿರಕ್ಟನಳ್ಳಿ 22.ಬಂಬಳಗಿ 23. ರೇಕುಳಗಿ 24. ಬಾಪುರ 25.ಮಗದಳ 26. ಹಾಳಹಳ್ಳಿ 27. ಕಮಲಾಪುರ 28.ಬ್ಯಾಳಹಳ್ಳಿ 29. ತಾಳಮಡಗಿ 30.ಮನ್ನಾ ಎ ಖೆಳ್ಳಿ ಒಟ್ಟು 30 ಗ್ರಾಮಗಳು ಬಾಧಿತವಾಗಿರುತ್ತವೆ.</td></tr>
<tr><td>ಆ)</td><td>ಈ ಗ್ರಾಮಸ್ಥರ ಸಮಸ್ಯೆಗಳಿಗೆ ಬಗೆಹರಿಸಲು ಈವರೆಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ; (ವಿವರ ನೀಡುವುದು)</td><td rowspan="2">ಕಾರಂಜಾ ಜಲಾಶಯದ ಹಿನ್ನೀರಿನಲ್ಲಿ ಸಂಪೂರ್ಣವಾಗಿ ಮುಳುಗಡೆಯಾಗಿರುವ 7 ಗ್ರಾಮಗಳು ಮತ್ತು ಭಾಗಶಃ ಮುಳುಗಡೆಯಾಗಿರುವ 1 ಗ್ರಾಮಕ್ಕೆ ಸಂಬಂಧಿಸಿದಂತೆ 9 ಪುನರ್ವಸತಿ ಕೇಂದ್ರಗಳನ್ನು (ಅತಿವಾಳ (ಅಮೀರಾಬಾದ), ಸಂಗೋಳಗಿ, ನೆಲವಾಡ, ಕಮಾಲಪೂರ (ನಿಜಾಮಪೂರ), ಹಜ್ಜರಗಿ (ನಿಜಾಮಪೂರ), ಸಿಂದಬಂದಗಿ (ಹಳ್ಳಿಖೇಡ (ಬಿ), ಡಾಕುಳಗಿ ರಂಜೋಳಖೇಣಿ-1 ಮತ್ತು ರಂಜೋಳಖೇಣಿ-2) ನಿರ್ಮಿಸಲಾಗಿದ್ದು, ಭೂಸ್ವಾಧೀನ ಕಾಯ್ದೆಯನ್ವಯ ನಿಯಮಾನುಸಾರ ಮೂಲಭೂತಸೌಕರ್ಯ ಒದಗಿಸಲಾಗಿದೆ.<br><br>ಸಂಪೂರ್ಣವಾಗಿ ಮುಳುಗಡೆಯಾದ 7 ಗ್ರಾಮಗಳಿಗೆ ಸಂಬಂಧಿಸಿದಂತೆ, ಪುನರ್ವಸತಿ ಕೇಂದ್ರಗಳನ್ನು ನಿರ್ಮಿಸಿ, ಸೌಕರ್ಯಗಳನ್ನು ಕಲ್ಪಿಸಿ, ಸಂಬಂಧಪಟ್ಟ ಗ್ರಾಮ ಪಂಚಾಯತಿ ರವರಿಗೆ 2000ನೇ ಸಾಲಿನಲ್ಲಿ ಹಸ್ತಾಂತರಿಸಲಾಗಿದ್ದು, ಭೂಸ್ವಾಧೀನ ಕಾಯ್ದೆಯನ್ವಯ ಪರಿಹಾರಧನ ನೀಡಲಾಗಿದೆ.<br><br>ಭಾಗಶಃ ಮುಳುಗಡೆಯಾದ ಗ್ರಾಮಗಳಿಗೆ ಸಂಬಂಧಿಸಿದಂತೆ, ರಂಜೋಳ ಖೇಣಿ ಫೇಸ್-1 & ಫೇಸ್-2ರಲ್ಲಿ ಒಟ್ಟಾರೆ 97 ಹಕ್ಕುಪತ್ರಗಳನ್ನು ಮೂಲ ವಾರಸುದಾರರಿಗೆ ಗುರುತಿಸಿ ಹಸ್ತಾಂತರಿಸಲು ಅಭಿಯೋಜಕರು, ರಂಜೋಳ ಖೇಣಿ ಗ್ರಾಮ ಪಂಚಾಯತಿರವರಿಗೆ ಹಸ್ತಾಂತರಿಸಲಾಗಿದ್ದು, ಹಕ್ಕು ಪತ್ರಗಳನ್ನು ವಿತಸಿದ ನಂತರ, ಸದರಿ ಪುನರ್ ವಸತಿ ಕೇಂದ್ರಗಳನ್ನು ಗ್ರಾಮ ಪಂಚಾಯಿತಿಗೆ ಹಸ್ತಾಂತರಿಸಲಾಗುವುದು.<br><br>ಬಾಕಿ 22 ಗ್ರಾಮಗಳ ಜಮೀನುಗಳುಗಳಿಗೆ ಸಂಬಂಧಿಸಿದಂತೆ ಭೂಸ್ವಾಧೀನ ಕಾಯ್ದೆಯನುಸಾರ ಸ್ವಾಧೀನ ಪ್ರಕ್ರಿಯೆ ಕೈಗೊಳ್ಳಲಾಗಿರುತ್ತದೆ.</td></tr>
<tr><td>ಇ)</td><td>ಇಲ್ಲಿನ ಜನರ ಸಮಸ್ಯೆಯನ್ನು ಶಾಶ್ವತವಾಗಿ ಪರಿಹರಿಸಲು ಸರ್ಕಾರ ಯಾವ ಯೋಜನೆಯನ್ನು ರೂಪಿಸಲಾಗಿದೆ?</td></tr>
</table>

**ಜಸಂಇ 101 ಎಂಎಲ್ಎ 2026**

(ಎನ್. ಚಲುವರಾಯಸ್ವಾಮಿ)
ಜಲಸಂಪನ್ಮೂಲ ಸಚಿವರು